# ಸಹ್ಯಾದ್ರಿ: ಕವಣೆ 2.0 ಸ್ಪರ್ಧೆ

**ಮಹಾನಗರ,** ಅ. 2: ಸಹ್ಯಾದ್ರಿ ಕಾಲೇಜಿನ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವತಿಯಿಂದ ಕಾಲೇಜಿನಲ್ಲಿ ಕವಣೆ 2.0 ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ವಿದ್ಯಾರ್ಥಿಗಳು ತಮ್ಮ ತಾಂತ್ರಿಕ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ನಡೆಸಲಾಯಿತು. 6 ಕಾಲೇಜುಗಳಿಂದ 43ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. ಬಾಲ್‌ಗಳನ್ನು ಮುಂದೂಡಬಲ್ಲ ಕವಣೆ ಸಾಧನದ ವಿಭಿನ್ನ ವಿನ್ಯಾಸಗಳನ್ನು ತಯಾರಿಸಿ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು.

ಸಹ್ಯಾದ್ರಿಯ ಪ್ರಾಂಶುಪಾಲ ಡಾ| ಆರ್. ಶ್ರೀನಿವಾಸ ರಾವ್ ಕುಂಟೆ ಕಾರ್ಯಕ್ರಮ ಉದ್ಘಾಟಿಸಿದರು. ಉಪ ಪ್ರಾಂಶುಪಾಲ ಪ್ರೊ| ಎಸ್.ಎಸ್. ಬಾಲಕೃಷ್ಣ ಡೀನ್-ಅಕಾಡೆಮಿಕ್‌ನ ಡಾ| ರಾಜೇಶ ಎಸ್., ಸಂಶೋಧನ ನಿರ್ದೇಶಕ ಡಾ| ಮಂಜಪ್ಪ ಎಸ್., ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗ ಮುಖ್ಯಸ್ಥ ಪ್ರೊ| ರವಿಚಂದ್ರ ಉಪಸ್ಥಿತರಿದ್ದರು.



ಕಾಲೇಜಿನಲ್ಲಿ ಕವಣೆ 2.0 ಕಾರ್ಯಕ್ರಮ ನಡೆಯಿತು.